**ಪಿ.ಡಬ್ಲ್ಯೂ-1**

**ದಿಃ 09.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ SBM ವಕೀಲರಿಂದ**

ದಾವಾ ಎ ಸ್ವತ್ತಿನಲ್ಲಿ ಮನೆ ಇದೆ. ದಾವಾ ಬಿ ಸ್ವತ್ತಿನಲ್ಲಿಯೂ ಸಹ ಮನೆ ಇದೆ. ದಾವಾ ಎ ಮತ್ತು ಬಿ ಸ್ವತ್ತಿಗೆ ಒಟ್ಟು 4 ಜನ ಮಾಲೀಕರು. ನಾನು ಹಾಜರು ಮಾಡಿರುವ ದಾಖಲೆಗಳ ಬಗ್ಗೆ ಗೊತ್ತಿದೆ. 4 ಜನ ಹೊರತು ಪಡಿಸಿ ಬೇರೆಯವರು ಸಹ ಮಾಲೀಕರಿದ್ದಾರೆ ಎಂದರೆ ಸಾಕ್ಷಿ ನನ್ನ ಅತ್ತೆ ಮೃತ ಪಟ್ಟಿದ್ದು ಅವರ ವಾರಸುದಾರರು ಮಾಲೀಕರಾಗಿರುತ್ತಾರೆ ಆದರೆ ಈವರೆಗೂ ಮರಣ ಪ್ರಮಾಣ ಪತ್ರ ಸಿಕ್ಕಿರುವುದಿಲ್ಲ. ನಾನು ಪೂರ್ಣ ಉತಾರ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಬೇರೆಯವರು ಸಹ ಮಾಲೀಕರಿದ್ದು ಅದನ್ನು ಮುಚ್ಚಿಡುವ ಉದ್ದೇಶದಿಂದ ಪೂರ್ಣ ಉತಾರ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಸುತ್ತಮುತ್ತ ಹಲವಾರು ಸಿಲ್ವರ ಪಾತ್ರೆಗಳನ್ನು ಉತ್ಪಾದನೆ ಮಾಡುವವರು ಮತ್ತು ಬಟ್ಟೆ ನೇಕಾರಿಕೆ ಮಾಡುವ ಸಣ್ಣ ಸಣ್ಣ ಉದ್ಯಮಗಳಿವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿವೆ ಎಂದು ನುಡಿಯುತ್ತಾರೆ. ಸದರಿ ಉದ್ಯಮಗಳು ನಮ್ಮ ಮನೆಯಿಂದ ಸುಮಾರು 200 ಮೀಟರ ದೂರದಲ್ಲಿವೆ. ನನಗೆ ಸದರಿ ಉದ್ಯಮಗಳು ನಿಖರವಾಗಿ ಎಲ್ಲಿವೆ ಎಂದು ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಿ ವರದಿ ಪಡೆದುಕೊಳ್ಳಲು ತೊಂದರೆ ಇಲ್ಲ.

ಪೋಲಿಸರು ನಾನು ದೂರು ಕೊಟ್ಟ ನಂತರ ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ನಾನು ಪೋಲಿಸರಿಗೆ ಯಾವುದೇ ದಾಖಲೆ ಕೊಟ್ಟಿರಲಿಲ್ಲ. ಮಹಾನಗರ ಪಾಲಿಕೆಗೆ ದೂರು ಕೊಟ್ಟ

**ಪಿ.ಡಬ್ಲ್ಯೂ-1**

ನಂತರ ಅಧಿಕಾರಿಗಳು ಬಂದು ಪರಿಶೀಲನೆ ಮಾಡಿ ಹೋಗಿದ್ದಾರೆ. ಸದರಿ ಅಧಿಕಾರಿಗಳು ನನಗೆ ವರದಿ ಕೊಟ್ಟಿಲ್ಲ. ನಾನು ಅಧಿಕಾರಿಗಳಿಗೆ ಕೇಳಿದಾಗ ನ್ಯಾಯಾಲಯದಲ್ಲಿ ಕೇಸು ಇದೆ ಎಂದು ಹೇಳಿದರು. ಸದರಿ ಅಧಿಕಾರಿಗಳ ಹೆಸರು ಗೊತ್ತಿಲ್ಲ. ಸದರಿ ಅಧಿಕಾರಿಗಳ ಹೆಸರು ಗೊತ್ತಿಲ್ಲದ ಕಾರಣ ಸಾಕ್ಷ್ಯ ಮಾಡಿಸುವುದಿಲ್ಲ. ನನಗೆ ಯಾರು ಸ್ಥಳ ಪರಿಶೀಲನೆ ಮಾಡಿದ್ದಾರೆ ಎಂದು ವಿಚಾರಿಸಲು ಪ್ರಯತ್ನ ಮಾಡಲಿಲ್ಲ. ನನಗೆ ಆಯುಕ್ತರ ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಅಧಿಕಾರಿಗಳ ಹೆಸರು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಜಾಂಶ ಹೊರಗೆ ಬರುತ್ತದೆ ಎಂದು ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಬೆಳಗಾವಿ.